International Journal of Kannada Research
www.kannadajournal.com

ISSN: 2454–5813
IJKR 2022; 8(4): 42-48
© 2022 IJKR
www.kannadajournal.com
Received: 08-09-2022
Accepted: 11-10-2022

ಶಪಾನ
ಸಂಶೋಧನ ವಿದ್ಯಾರ್ಥಿನಿ
(ಕನ್ನಡ ಮುಖ್ಯ
ಉಪನ್ಯಾಸಕಿ)
ಹಸನಾತ್ ಪದವಿ ಮಹಿಳಾ
ಕಾಲೇಜು ಡಿಕೆನ್ ಸನ್ ರಸ್ತೆ,
ಕರ್ನಾಟಕ, ಭಾರತ

Corresponding Author:
ಶಪಾನ
ಸಂಶೋಧನ ವಿದ್ಯಾರ್ಥಿನಿ
(ಕನ್ನಡ ಮುಖ್ಯ
ಉಪನ್ಯಾಸಕಿ)
ಹಸನಾತ್ ಪದವಿ ಮಹಿಳಾ
ಕಾಲೇಜು ಡಿಕೆನ್ ಸನ್ ರಸ್ತೆ,
ಕರ್ನಾಟಕ, ಭಾರತ

# ಅಕ್ಕಮಹಾದೇವಿ ಮತ್ತು ಹಝ್ರತ್ ಆಯಿಶಾ (ಇಸ್ಲಾಂ) ಒಂದು ಅವಲೋಕನ

**ಶಪಾನ**

**ಅಕ್ಕಮಹಾದೇವಿ**

ಅಕ್ಕಮಹಾದೇವಿ ಕನ್ನಡದ ಪ್ರಥಮ ಮಹಿಳಾ ಕವಿಯಿತ್ರಿಯಾಗಿದ್ದಾರೆ. ಶರಣ ಚಳುವಳಿಯ ಪ್ರಮುಖರಾಗಿ, ಸ್ವಾಭಿಮಾನದ ಪ್ರತೀಕವಾಗಿ, ಸ್ತ್ರೀ-ವಾದಿ ಚಳುವಳಿಯ ನಿಜವಾದ ಪ್ರತಿಪಾದಕಿಯಾಗಿ, ಅಕ್ಕರೆಯ ಅಕ್ಕನಾಗಿ ಗುರುತಿಸಬಹುದಾಗಿದೆ. ಚಿಕ್ಕ ವಯಸ್ಸಿನಲ್ಲೆ ಸಕಲ ಸುಖವನ್ನು ತ್ಯಜಿಸಿದ ಅಕ್ಕ, ಎದುರಿಸಿದ ಪರೀಕ್ಷೆಗಳು ಬಹಳಷ್ಟು. ಲೌಕಿಕ ಜಗತ್ತನ್ನು ಧಿಕ್ಕರಿಸಿ, ಕೇಶಾಂಬರೆಯಾಗಿ ನಡೆದ ಅಕ್ಕ ಹಲವಾರು ಭಕ್ತರಿಗೆ ಮಾದರಿಯಾಗಿದ್ದಾರೆ.

ಶರಣೆ ಅಕ್ಕಮಹಾದೇವಿಯವರು ಜನಿಸಿದ್ದು ಶಿವಮೊಗ್ಗ ಜಿಲ್ಲೆ, ಶಿಕಾರಿಪುರ-ಶಿರಾಳ ಕೊಪ್ಪದ ನಡುವೆ ಇರುವ ಉಡುತಡಿ ಎಂಬ ಪುಟ್ಟ ಗ್ರಾಮದಲ್ಲಿ.

ಅಕ್ಕಮಹಾದೇವಿಯವರು ಮುಂದೆ ಅನುಭವ ಮಂಟಪದಲ್ಲಿ ಅಲ್ಲಮಪ್ರಭು, ಬಸವಣ್ಣ, ಚೆನ್ನಬಸವಣ್ಣ, ಸಿದ್ದರಾಮ ಮೊದಲಾದ ಶರಣರೊಡನೆ ಕಲ್ಯಾಣದ ಕ್ರಾಂತಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರಲ್ಲದೇ "ಚೆನ್ನಮಲ್ಲಿಕಾರ್ಜುನ" ಎಂಬ ಅಂಕಿತನಾಮದಲ್ಲಿ ವಚನ ಸಾಹಿತ್ಯಕ್ಕೆ ತಮ್ಮದೇ ಆದ ಸಾಹಿತ್ಯ ಸೇವೆಯನ್ನು ಸಲ್ಲಿಸಿದ್ದಾರೆ.

ಅಕ್ಕಮಹಾದೇವಿಯವರ ಜೀವನ ಅಸಾಮಾನ್ಯವಾದ, ವೈಶಿಷ್ಟ್ಯತೆಯಿಂದ, ವೈಚಾರಿಕವಾದ, ಅನುಭಾವಪೂರ್ಣವಾದ ನುಡಿ, ನಡೆಗಳೊಂದಾದ ಪರಿಯಲ್ಲಿರುವುದು ಕಂಡು ಬರುತ್ತದೆ. ವಚನಕಾರರಲ್ಲಿಯೇ ಅತ್ಯಂತ ಕಿರಿಯ ವಯಸ್ಸಿನ ಅನುಭವಿಯಾಗಿದ್ದರೂ ಸಹ, ವಿಶಿಷ್ಟ ಜೀವನಾನುಭವವನ್ನು ಹೊಂದಿದ ಕಾರಣದಿಂದ, ಅವರ ಬರಹಗಳು ಗಮನಾರ್ಹವಾಗಿವೆ.

ಇವರ ಜೀವನದ ನಿರ್ಣಾಯಕ ಘಟನೆಗಳಲ್ಲಿ ಪ್ರಮುಖವಾದವು ಎರಡು ಘಟನೆಗಳು;

1) ಅಕ್ಕರವರು ಅಧಿಕಾರ, ಸಂಪತ್ತು, ವೈಭವ, ಆಡಂಬರ, ಭೋಗ ಜೀವನಗಳನ್ನು ಸಂಪೂರ್ಣವಾಗಿ ತಿರಸ್ಕರಿಸಿ, ಈ ಎಲ್ಲಾ ಬಂಧನಗಳಿಂದ ಬಿಡುಗಡೆ ಪಡೆದು ಸಾಮಾನ್ಯರಲ್ಲಿ ಸಾಮಾನ್ಯದಂತೆ ಜನ ಜೀವನದಲ್ಲಿ ಬೆರೆತದ್ದು ಇದಕ್ಕಾಗಿ, ಅರಸೊತ್ತಿಗೆಯನ್ನು ಎದುರು ಹಾಕಿಕೊಳ್ಳಲು ಹಿಂಜರಿಯದಿದ್ದದ್ದು.

2) ಶರಣ ಚಳುವಳಿಯಲ್ಲಿ ಭಾಗವಹಿಸಲು ನಿರ್ಣಯಿಸಿ, ಅನುಭವ ಮಂಟಪವನ್ನು ಪ್ರವೇಶ ಮಾಡಿದ್ದದ್ದು. 12ನೇ ಶತಮಾನದಲ್ಲಿದ್ದ ಅಕ್ಕಮಹಾದೇವಿ, ನಿರ್ಮಲ ಶೆಟ್ಟಿ ಮತ್ತು ಸುಮತಿಯರ ಮಗಳು ರಾಜ ಕೌಶಿಕ ಮಹಾದೇವಿಯನ್ನು ಮದುವೆಯಾಗಲು ಬಯಸಿ ಒತ್ತಾಯಿಸಿದ. ಅಕ್ಕ ಶರತ್ತುಗಳನ್ನು ವಿಧಿಸಿ ಮದುವೆಗೆ ಒಪ್ಪಿದರೂ ಕೌಶಿಕ ವಚನಭಂಗ ಮಾಡಿದಾಗ, ಅಕ್ಕ ಸಂಸಾರ ತ್ಯಾಗ ಮಾಡಿ, ವಿರಕ್ತಳಾಗಿ ಚೆನ್ನಮಲ್ಲಿಕಾರ್ಜುನನನ್ನು ಹುಡುಕಿಕೊಂಡು ಹೊರಟದ್ದು.

ಶರಣಸತಿ ಲಿಂಗಪತಿ- ಮಹಾದೇವಿಯಕ್ಕನ ಜೀವನ ಚರಿತ್ರೆ ಹೆಣ್ಣಿನ ಗೌರವ ಸಾಧನೆಯ ಹೆಣ್ಣಿನ ಸ್ವಾತಂತ್ರ್ಯ ಸಾಧನೆಯ, ಹೆಣ್ಣಿನ ಪರಮಾರ್ಥ ಸಾಧನೆಯ ಒಂದು ಮಹಾಪ್ರಕರಣ. ಅಕ್ಕ ತನುವಿನಾಸೆಯನ್ನು ಬಿಟ್ಟು ಮನಸ್ಸನ್ನು ಜಯಿಸಿ ಜ್ಞಾನಮೂರ್ತಿಯಾಗಿದ್ದರು. ತಂದೆ ತಾಯಿಗಳು, ನೆಂಟರಿಷ್ಟರು, ಎಲ್ಲರೂ ಸೇರಿ ಈ ವಯಸ್ಸಿಗೆ ಇದೇನು ವೈರಾಗ್ಯ ! ಇದೇನು ವೇಷ, ಹಿಂದಿರುಗು ಒಬ್ಬಳೇ ಎಲ್ಲಿಗೆ ಹೋಗುವೆ.? ಚೆನ್ನಮಲ್ಲಿಕಾರ್ಜುನನನ್ನು ನೀನು ಕಾಣಲಾಗುವುದೇ ? ಇಂಥ ಹುಚ್ಚು ಧೈರ್ಯವನ್ನು ಮಾಡಬಾರದು ಎಂದು ವಿವೇಕವನ್ನು ಹೇಳಿದರು. ಆದರೆ ಅಕ್ಕ ಯಾರ ಮಾತನ್ನು ಕೇಳಲಿಲ್ಲ ಹಿಂದಿರುಗಲಿಲ್ಲ.

ಲೌಕಿಕ ದೃಷ್ಟಿಯಿಂದ ಮದುವೆಯಾಗಬೇಕೆಂದು ಮಹಾದೇವಿಯಕ್ಕ ಪರಿತಪ್ಪಿಸಲಿಲ್ಲ, ಆಕೆಯದು ಪಾರಮಾರ್ಥಿಕ ದೃಷ್ಟಿ. ಅಕ್ಕನ ವಚನಗಳಲ್ಲಿ ಬರುವ ಉಪದೇಶಗಳು ಬಹಳ ಮಹತ್ವವುಳ್ಳವು ಎಲ್ಲಾ ಕಡೆಯೂ ಚೆನ್ನಮಲ್ಲಿಕಾರ್ಜುನನು ಇರುವನೆಂದು ನಂಬಿ, ಆತನನ್ನು ಧ್ಯಾನಿಸುತ್ತಾ, ಕರೆಯುತ್ತಾ, ಹಾಡುತ್ತಾ, ಹುಡುಕುತ್ತಾ ಹೊರಟರು ಅಕ್ಕ ಸಮಾಧಾನಚಿತ್ತ ಸರ್ವಸಮತಾಭಾವ ದೊರೆಯಬೇಕು. ಅವು ದೊರೆಯದಿದ್ದರೆ ಅರಿಷಡ್ವರ್ಗಕ್ಕೆ ಈಡಗಿ, ಹುಟ್ಟು ಸಾವುಗಳೆಂಬ ಚಕ್ರದಲ್ಲಿ ಸುತ್ತುತ್ತಿರಬೇಕಾಗುತ್ತದೆ, ಪರಮಾರ್ಥವನ್ನು ತಿಳಿಯಲಾಗುವುದಿಲ್ಲ. ಇವುಗಳನ್ನು ಪಡೆಯದೆ ಭಕ್ತರೆಂದೂ ಜ್ಞಾನಿಗಳೆಂದೂ ವೇಷವನ್ನು ಧರಿಸಿ ಪ್ರಯೋಜನವೇನು? ಎಂದು ಅಕ್ಕನ ವಚನದ ಮೂಲಕ ತಿಳಿಯಬಹುದು.

ಹಾಗೆಯೇ ಮತ್ತೊಂದು ವಚನದಲ್ಲಿ ಅಕ್ಕ ಈ ರೀತಿ ಹೇಳುತ್ತಾರೆ.

ಅಜ್ಞಾನಿಗಳ ಸಹವಾಸದ ಫಲವನ್ನು ತಿಳಿಸಿ, ಶರಣದ ಸಹವಾಸದ ಫಲವನ್ನು ತಿಳಿಸಿ, ಶರಣರ ಸಹವಾಸ ಎಲ್ಲಕ್ಕಿಂತಲೂ ಮಿಗಿಲಾದುದ್ದು, ಲಿಂಗಾಂಗ ಸಾಮರಸ್ಯ ಜ್ಞಾನದಿಂದ ಐಕ್ಯವನ್ನು ದೊರಕಿಸುವುದಾಗಿದೆ ಎಂದು ಹೇಳುತ್ತಾರೆ.

"ಹಾವಿನ ಬಾಯ ಹಲ್ಲುಕಳೆದು ಹಾವನಾಡಿಸಬಲ್ಲದೆ ಹಾವಿನ ಸಂಗವೇ ಲೇಸು ಕಂಡಯ್ಯ, ಕಾಯದ ಸಂಗವೇ ಲೇಸು ಕಂಡಯ್ಯ, ತಾಯಿ ರಕ್ಕಸಿಯಾದಂತೆ ಕಾಯವಿಕಾರವು,ಚೆನ್ನಮಲ್ಲಿಕಾರ್ಜುನಯ್ಯ ನೀನೊಲಿದವರು ಕಾಯಗೊಂಡಿದ್ದಾರೆನ ಬೇಡ. ಕಾಯವೆಂಬುದು ಸರ್ಪದಂತೆ, ಕಾಯದ ವಿಷದ ಹಲ್ಲುಗಳನ್ನು - ಮಾಯೆ-ಮೋಹಗಳನ್ನು ಕಳೆದು ನಿರ್ಲಿಪ್ತನಾಗಿ ಕಾಯದೊಳಗಿರಬ್ಬರೆ,

ಕಾಯದಲ್ಲಿದ್ದು ಮುಕ್ತಿಯನ್ನು ಪಡೆಯಬಹುದು. ಆಗ ಕಾಯವಿಡಿದಿದ್ದರೂ ಅವರು ನಿಃಕಾಯರು, ಕರ್ಮ ಮಾಡಿದರೂ ನಿಷ್ಕರ್ಮಿಗಳು,

ಲಿಂಗಾತನು ಲಿಂಗಮಾನ ಆಗಿರುವುದರಿಂದ 'ಕಾಯದ ಸಂಗವೇ ಲೇಸು ಕಂಡಯ್ಯ'. ಆದರೆ ಕಾಯದ ವಿಚಾರಕ್ಕೆ ಒಳಗಾಗಿ ಪಂಚೇಂದ್ರಿಯಗಳ ಆಧೀನನಾಗಿ, ವಿಷದ ಹಲ್ಲುಗಳಿಂದ ಕಚ್ಚಿಸಿಕೊಂಡರೆ ಆತ್ಮ ನಷ್ಟ-ಎಂದು ಬಹು ಭಾವ ಗರ್ಭಿತವಾದ ವಚನವನ್ನು ಮಹಾದೇವಿಯಕ್ಕ ಹೇಳಿದ್ದಾರೆ. ಮಾಯೆ ಎಂಬುದು ಕೇವಲ 'ಪ್ರಂಪಂಚಿ' ಗಳನ್ನು ಮಾತ್ರ ಮುಸುಕಿರುದೆಂದು ತಿಳಿಯಬೇಡಿ, ಅದು ವಿವಿಧ ರೂಪಗಳಲ್ಲಿ ವಿವಿಧ ಜನರನ್ನು ಹಿಡಿದು ಕಾಡುತ್ತದೆ, ಅದರಿಂದ ಪಾರಾಗುವುದು ಸುಲಭವಲ್ಲ.

"ಬಿಟ್ಟನೆಂದರೆ ಬಿಡದೀ ಮಾಯೆ.
ಬಿಡದಿದ್ದರೆ ಬೆಂಬುತ್ತಿತ್ತು ಮಾಯೆ.
ಯೋಗಿಗೆ ಯೋಗಿಣಿಯಯಿತ್ತು ಮಾಯೆ.
ಸವಣಂಗೆ ಸವಣಿಯಾಯಿತು ಮಾಯೆ.
ಯತಿಗೆ ಪರಕಿಯಾಯಿತು ಮಾಯೆ.
ನಿನ್ನ ಮಾಯೆಗೆ,

ನಾನಂಜುವಳಲ್ಲ ಚೆನ್ನಮಲ್ಲಿಕಾರ್ಜುನ ದೇವ ನಿರ್ಮ್ಮಾಣೆ."

ಎಂಬ ದೊಡ್ಡ ಅನುಭವದ ನುಡಿಯನ್ನು ಅಕ್ಕ ಹೇಳಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ 'ಯತಿಗೆ ಪರಕಿಯಾಯಿತು ಮಾಯೆ, ಸರ್ವಸಂಗ ಪರಿತ್ಯಾಗ ಮಾಡಿದವನೂ, ಹೊನ್ನು ಹೆಣ್ಣು, ಮಣ್ಣುಗಳನ್ನು ಅರಿಸಿದವನೂ, ಪರಮಪ್ರತಿಯು ಆದ ಯೋಗಿಗೆ 'ಹೊಗಳಿಕೆ' ಎಂಬುದು ಅಡ್ಡದಾರಿ ಹಿಡಿಸುವ ಮಾಯೆಯಾಗಿದೆ.

'ಅಹಂ' ಎಂಬುದನ್ನು ಎಬ್ಬಿಸಿ ಅವನ ಗತಿಯನ್ನು ಕೆಡಿಸಿ, ನರಕಕ್ಕೆ ಇಳಿಸುವ ಮಾಯೆ ಆ ಹೊಗಳಿಕೆ. ಅಕ್ಕನ ವಚನವಾಗಿದೆ.

ಅಕ್ಕ ಸಾಹಿತ್ಯದ ಮೊದಲ ಬಂಡಾಯ ಕವಯತ್ರಿ ಮತ್ತು ವಚನಗಾರ್ತಿ ಹಾಗೂ ಮಹಿಳೆಯರ ಪ್ರತಿನಿಧಿಯಾಗಿ ಅಭಿವ್ಯಕ್ತಿಯಲ್ಲಿ ಪುರುಷ ಸಮಾಜವನ್ನು ಪ್ರತಿಭಟಿಸಿದವರು. ಸಾಮಾಜಿಕ ಬದಲಾವಣೆಗೆ ಶ್ರಮಿಸಿದವರು. "ಚನ್ನಮಲ್ಲಿಕಾರ್ಜುನ" ಎಂಬುದು ಈಕೆಯ ವಚನಗಳ ಅಂಕಿತ ನಾಮ. "ಯೋಗಾಂಗತ್ರಿವಿಧಿ" ಅಕ್ಕಮಹಾದೇವಿಯ ಪ್ರಮುಖ ಕೃತಿ.

ಹಜ್ರತ್ ಆಯಿಶಾ

- ((ಪ್ರವಾದಿ ಮಹಮ್ಮದ್ ಅವರ ಪ್ರಸ್ತಾಪ ಬಂದಾಗಲೆಲ್ಲ ಹೆಸರಿನ ಜೊತೆಗೆ (ಸ)ಎಂದು ಆವರಣದಲ್ಲಿ ಕೊಡಲಾಗಿದೆ. ಇದು " ಸಲ್ಲಲ್ಲಾಹು ಅಲೆಹಿ ವಸಲ್ಲಂ " ಎಂಬುವುದರ ಸಂಕ್ಷಿಪ್ತ ಸಂಕೇತ. ಇದರರ್ಥ ಅಲ್ಲಾ ನಾ ಅನುಗ್ರಹಗಳು ಶಾಂತಿಯು ಅವರ ಮೇಲಿರಲಿ ಎಂದಾಗಿದೆ.
- ಪ್ರವಾದಿಯ ಸಂಗಾತಿಗಳ ಹೆಸರಿನ ಪ್ರಸ್ತಾಪ ಬಂದಾಗ (ರ) ಎಂಬ ಸಂಕೇತಾಕ್ಷರವನ್ನು ಬಳಸಲಾಗಿದೆ. ಇದು "ರದಿಯಲ್ಲಾಹು ಅನ್ ಹು" ಎಂಬ ಅರಬೀ ನುಡಿಯ ಸಂಕೇತ. ಇದರರ್ಥ ಅಲ್ಲಾಹನು ಅವರಿಂದ ಸಂಪ್ರೀತನಾಗಲಿ ಎಂದಾಗಿದೆ.
- ಹೆಸರಿನ ಆರಂಭದಲ್ಲಿ (ಹ) ಎಂಬ ಅಕ್ಷರವನ್ನು ಕೊಡಲಾಗಿದೆ. ಇದು ಅವರಿಗೆ ಗೌರವ ಸೂಚಕವಾಗಿ ಬಳಸಲ್ಪಡುವ " ಹಜ್ರತ್ " ಎಂಬ ಪದದ ಸಂಕೇತ.))

ಇಸ್ಲಾಮಿನ ಪ್ರಥಮ ಕಲೀಫರಾದ (ಹ)ಅಬೂಬಕರ್(ರ)ರವರ ಕಿರಿಯ ಪುತ್ರಿ (ಹ)ಆಯಿಶಾ (ರ) ಇಸ್ಲಾಮೀ ಇತಿಹಾಸದಲ್ಲಿ (ಹ)ಅಬೂಬಕ್ಕರ್(ರ)ರು ಪ್ರಸಿದ್ಧರಾದಂತೆ,(ಹ)ಆಯಿಶಾ ರವರು ಪ್ರಸಿದ್ದರಾಗಿದ್ದಾರೆ. ಇವರ ತಾಯಿಯ ಹೆಸರು ಎಮ್ಮುರೂಮಾನ್(ರ)(ಹ)ಆಯಿಶಾ(ರ) ರ ಸಹೋದರ ಅಬ್ದುಲ್ ರೆಹಮಾನ್(ರ) ಇವರ ಸಹೋದರಿ ಅಸ್ಮಾ(ರ)

(ಹ)ಆಯಿಶಾ(ರ) ಬಾಲ್ಯದಿಂದಲೇ ಶ್ವೇತಾವರಣ, ನಗುಮೊಗದ ಚೆಲುವೆ. ತೆಳ್ಳಗಿನ ಮೈಕಟ್ಟು, ಚುರುಕು ಬುದ್ಧಿಯ ಅವರನ್ನು ಕಂಡವರು ಹುಮೇರಾ ಎಂದು ಕರೆಯುತ್ತಿದ್ದರು.

(ಹ)ಆಯಿಶಾ(ರ) ಬಾಲ್ಯವು ಸಾಮಾನ್ಯ ಬಾಲಕಿಯರಿಗಿಂತ ವಿಭಿನ್ನವಾಗಿತ್ತು. ಇವರಿಗೆ ಜೋಕಾಲಿ ಅತ್ಯಂತ ಪ್ರಿಯವಾದ ಆಟ. ಹೆಚ್ಚಿನ ಸಮಯ ಬೊಂಬೆಯಾಟದಲ್ಲಿ ಕಳೆಯುತ್ತಿದ್ದರು. ಬಾಲ್ಯದ ಘಟನೆಗಳನ್ನು ಜೀವನ ಪರ್ಯಂತ ನೆನಪಿಡುವಷ್ಟು ಸ್ಮರಣ ಶಕ್ತಿಯನ್ನು ಅಲ್ಲಾಹ ಆಯಿಶಾರಿಗೆ ದಯಪಾಲಿಸಿದ್ದರು.

ಮಹಿಳೆಯರಲ್ಲಿ (ಹ)ಆಯಿಶಾರು(ರ) ಸ್ಥಾನ ಶ್ರೇಷ್ಠವಾಗಿದೆ. ಈ ಕಾರಣದಿಂದಲೇ ಆಯಿಶಾರು ಸ್ತ್ರೀಯರಿಗೆ ಮಾದರಿಯಾಗಿದ್ದಾರೆ.

(ಹ)ಆಯಿಶಾರವರ ವಿವಾಹವು ಅತ್ಯಂತ ಸರಳವಾಗಿ ನೆರವೇರಿತು. ಅದು ಶವ್ವಾಲ್ ತಿಂಗಳಲ್ಲಿ ವಿವಾಹವಾಯಿತು. ಅರಬರ ಶವ್ವಾಲ್ ತಿಂಗಳಲ್ಲಿ ವಿವಾಹವಾಗುವುದನ್ನು ಅಪಶಕುನವೆನ್ನುತ್ತಿದ್ದರು. ಅಂಧ ಶ್ರದ್ಧೆಯಿಂದಾಗಿ ಜನರು ಆ ತಿಂಗಳಲ್ಲಿ ಶುಭ ಕಾರ್ಯ ನಡೆಸುವುದನ್ನು ಇಷ್ಟಪಡುತ್ತಿರಲಿಲ್ಲ. ಪ್ರವಾದಿ(ಸ) ಆ ತಿಂಗಳಲ್ಲಿ ಮದುವೆಯಾಗುವ ಮೂಲಕ ಆ ಅಂಧ ವಿಶ್ವಾಸದ ಬೇರನ್ನೇ ಕಿತ್ತೆಸೆದರು. ಪ್ರವಾದಿಯರು(ಸ) ಆಯಿಶಾರ ಸಾಮರ್ಥ್ಯವನ್ನು ಅರಿತು, ಅವರಿಗೆ ಶಿಕ್ಷಣ ಹಾಗೂ ತರಬೇತಿ ನೀಡಿದ್ದರು. ಚತುರೆ ಹಾಗೂ ಜ್ಞಾನಗಳಿಸುವ ಆಸಕ್ತಿಯುಳ್ಳವರಾಗಿದ್ದ ಆಯಿಶಾರು ತಮಗೆ ತಿಳಿಯದ ವಿಚಾರಗಳನ್ನು ಪ್ರವಾದಿಯವರಿಂದ ಕೇಳಿ

ತಿಳಿದುಕೊಳ್ಳುತ್ತಿದ್ದರು. ಯಾವುದೇ ಒಂದು ವಿಷಯ ಸಂಪೂರ್ಣವಾಗಿ ಅರ್ಥವಾಗುವವರೆಗೆ ಪ್ರಶ್ನೆಗಳನ್ನು ಕೇಳುತ್ತಿದ್ದರು. ಪ್ರವಾದಿಯವರು ಕೂಡ ಸಮಾಧಾನದಿಂದ ಅವರಿಗೆ ಅರ್ಥವಾಗುವವರೆಗೂ ಹೇಳುತ್ತಿದ್ದರು. ಆಯಿಶಾರವರು ಧಾರ್ಮಿಕ ಜ್ಞಾನ ಪಡೆದು ಇತರರಿಗೆ ಆ ಜ್ಞಾನವನ್ನು ಧಾರೆ ಎರೆಯುವ ಬಗ್ಗೆ ಆಸಕ್ತಿ ಹೊಂದಿದ್ದರು.

(ಹ)ಆಯಿಶಾರವರ ಕುಟುಂಬ ಜೀವನವು ತುಂಬಾ ಸರಳವಾಗಿತ್ತು. ತಿಂಗಳುಗಟ್ಟಲೆ ಮನೆಯಲ್ಲಿ ಒಲೆ ಉರಿಯುತ್ತಿರಲಿಲ್ಲ. ಒಣ ಖರ್ಜೂರ ಹಾಗೂ ನೀರಿನಿಂದಲೇ ದಿನ ದೂಡುತ್ತಿದ್ದರು. ಮನೆ ಸಣ್ಣದಿರಲಿ - ದೊಡ್ಡದಿರಲಿ, ಮನೆಯೊಡತಿ ಹರ್ಷೋಲ್ಲಾಸದಿಂದ ಸಕಲ ಕೆಲಸ ಕಾರ್ಯಗಳನ್ನು ಸ್ವತಃ ಮಾಡಿದರೆ ಮಾತ್ರ ಅದು ಮಾದರಿ ಮನೆಯಾಗಲು ಸಾಧ್ಯ. (ಹ)ಆಯಿಶಾರು ಕೆಲಸ ಕಾರ್ಯಗಳಲ್ಲಿ ಇತರ ಸ್ತ್ರೀಯರಿಗೆ ಮಾದರಿಯಾಗಿದ್ದರು. ಅತಿಥಿ ಸತ್ಕಾರದಲ್ಲಿ ಯಾವುದೇ ಕುಂದು ಕೊರತೆ ಮಾಡುತ್ತಿರಲಿಲ್ಲ. ಉಪವಾಸವಿದ್ದರೂ ಪರವಾಗಿಲ್ಲ ತಮ್ಮಲ್ಲಿರುವ ಹಣ, ಆಹಾರ, ಎಲ್ಲವನ್ನೂ ದಾನ ಮಾಡುತ್ತಿದ್ದರು (ಹ)ಆಯಿಶಾರವರು ಲೌಕಿಕ ವ್ಯಾಮೋಹಕ್ಕೆ ಬಲಿಯಾಗದಂತೆ ಜಾಗರೂಕತೆ ವಹಿಸಿದ್ದರು.

ರಮಝಾನಿನ ಉಪವಾಸವನ್ನು ಹೊರತುಪಡಿಸಿ ಆಯಿಶಾ(ರ)ರು ಇತರ ದಿನಗಳಲ್ಲೂ ಉಪವಾಸವನ್ನಾಆಚರಿಸುತ್ತಿದ್ದರು. ಹರಫಾದ ದಿನ ತಪ್ಪದೇ ಉಪವಾಸವನ್ನಾಚರಿಸುತ್ತಿದ್ದರು. ಒಮ್ಮೆ ಹರಫಾದ ದಿನವು ಅತಿ ಹೆಚ್ಚು ಸೆಕೆ ಹಾಗೂ ತಾಪದಿಂದ ಕೂಡಿತ್ತು. ಅಂದು ಎಂದಿನಂತೆ ಆಯಿಶಾ(ರ)ರು ಉಪವಾಸ ಹಿಡಿದಿದ್ದರು. ತೀವ್ರ ಸೆಕೆಯಿಂದಾಗಿ ತಲೆಯ ಮೇಲೆ ಆಗಾಗ್ಗೆ ನೀರನ್ನು ಚಿಮುಕಿಸುತ್ತಿದ್ದರು. ಅಷ್ಟರಲ್ಲೇ ಸಹೋದರ ಅಬ್ದುಲ್ ರೆಹಮಾನ್ ರು ಅಲ್ಲಿಗೆ ಆಗಮಿಸಿದರು. "ಇಷ್ಟು ಸೆಕೆಯಲ್ಲಿ ಐಚ್ಚಿಕ ಉಪವಾಸವಿಡುವ ಅವಶ್ಯಕತೆ ಏನಿತ್ತು?" ಎಂದರು. ಆಗ ಆಯಿಶಾ(ರ)ರು- ಪ್ರವಾದಿಯವರು(ಸ) ಈ ರೀತಿ ಹೇಳಿದ್ದಾರೆ, " ಯಾರು ಅರಫಾದ ದಿನ ಉಪವಾಸವನ್ನಾಚರಿಸುತ್ತಾರೋ ಅವರ ಇಡೀ ವರ್ಷದ ಪಾಪಗಳು ಮನ್ನಿಸಲ್ಪಡುತ್ತವೆ. ಆದುದರಿಂದ ನಾನು ಅರಫಾ ದಿನದ ಉಪವಾಸವನ್ನು ಬಿಡಲಾರೆ" ಎಂದರು ಆಯಿಶಾ(ರ)ರು ಪ್ರತಿ ವರ್ಷ ತಪ್ಪದೇ ಹಜ್ಜ್ ನಿರ್ವಹಿಸುತ್ತಿದ್ದರು.

ಆಯಿಶಾ(ರ)ರು ಬಹಳ ಉದಾರಿಯಾಗಿದ್ದರು. ಕೈಗೆ ಬಂದುದೆಲ್ಲವನ್ನೂ ಬೇಡುವವನಿಗೆ ದಾನ ಮಾಡಿ ಬಿಡುತ್ತಿದ್ದರು.

ಒಮ್ಮೆ ಅಬ್ದುಲ್ಲಾ ಬಿನ್ ಝುಬೈರ್(ರ)ರು ಒಂದು ಲಕ್ಷ ಮೊತ್ತವನ್ನು ಕಳುಹಿಸಿದ್ದರು. ಅವೆಲ್ಲವನ್ನೂ ಆಯಿಶಾ(ರ)ರು ದಾನ ಮಾಡಿದರು. ಅದರಲ್ಲಿ ಎರಡು ದಿರ್ಹಮ್ ಉಳಿದಿತ್ತು. ಮನೆಯ ಮುಂದೆ ಓರ್ವ ಭಿಕ್ಷುಕ ನಿಂತಿದ್ದ. "ನೀವು ಇಂದು ಉಪವಾಸದಿಂದಿದ್ದೀರಿ. ಈ ಎರಡು ದಿರ್ಹಮ್ ಅನ್ನು ಉಳಿಸಿಕೊಳ್ಳಿರಿ" ಎಂದು ದಾಸಿ ಹೇಳಿದಳು. ಆಗ ಆಯಿಶಾ(ರ)ರು "ಈಗ ಬೇಡ" ಎಂದು ಆ ಎರಡು ದಿರ್ಹಮ್ ಅನ್ನೂ ಭಿಕ್ಷುಕನಿಗೆ ನೀಡಿ ಬಿಟ್ಟರು.

ಒಮ್ಮೆ ಆಯಿಶಾ(ರ)ರು ಉಪವಾಸದಿಂದಿದ್ದರು. ಇಂದು ಇಫ್ತಾರ್ ಗಾಗಿ ಕೇವಲ ಒಂದು ಚಪಾತಿ ಮಾತ್ರವಿತ್ತು. ಅಷ್ಟರಲ್ಲಿ ಓರ್ವ ಮಹಿಳೆ ಅಲ್ಲಿಗೆ ಬಂದಳು. ಆಗ ಆಯಿಶಾ(ರ)ರು ದಾಸಿಯನ್ನು ಕರೆದು ಚಪಾತಿಯನ್ನು ಆ ಮಹಿಳೆಗೆ ನೀಡುವಂತೆ ಹೇಳಿದರು. ಆಗ ದಾಸಿಯು, "ಇಫ್ತಾರ್ ಗಾಗಿ ಆ ಚಪಾತಿಯನ್ನು ಇಟ್ಟಿದ್ದೆ" ಎಂದಳು. ಆಯಿಶಾ(ರ)ರು ಅದನ್ನು ಕೊಟ್ಟು ಬಿಡು ಎಂದರು.

ಆಯಿಶಾ(ರ)ರಿಗೆ ಮಕ್ಕಳಿರಲಿಲ್ಲ. ಆದುದರಿಂದ ಅವರು(ರ) ಮಕ್ಕಳನ್ನು ದತ್ತು ಪಡೆದು ಸಾಕಿದ್ದರು. ಅವರಿಗೆ ತರಬೇತಿ ನೀಡುತ್ತಿದ್ದರು. ದೊಡ್ಡವರಾದಾಗ ಅವರ ವಿವಾಹ ಮಾಡಿಸುತ್ತಿದ್ದರು.

ಹ.ಆಯಿಶಾರವರ(ರ)ರು ಇತಿಹಾಸದ ಕೌಶಲ್ಯವನ್ನು ತನ್ನ ಪಿತರಾದ ಅಬೂಬಕರ್ (ರ) ರಿಂದ ಕಲಿತರು. ಅರಬ್ ನ ಪರಿಸ್ಥಿತಿ, ಅಜ್ಞಾನ ಕಾಲದ ಆಚರಣೆಗಳು, ಪ್ರಸಿದ್ಧ ಗೋತ್ರಗಳ ವಂಶವೃಕ್ಷವು ಅಬೂಬಕರ್(ರ)ರಿಗೆ ಚೆನ್ನಾಗಿ ತಿಳಿದಿತ್ತು. ಅವರು(ರ) ತಮ್ಮ ಪುತ್ರಿ ಆಯಿಶಾ(ರ)ರಿಗೆ ಇದನ್ನೆಲ್ಲಾ ತಿಳಿಸಿದ್ದರು ಹಾಗೂ ಆಯಿಶಾ(ರ)ರು ಅದನ್ನು ನೆನಪಿನಲ್ಲಿಟ್ಟರು. ಹ.ಅರ್ ವಾರು ಹೇಳುತ್ತಾರೆ, "ನಾನು

ಇತಿಹಾಸ ಹಾಗೂ ವೈದ್ಯಶಾಸ್ತ್ರದಲ್ಲಿ ಆಯಿಶಾ(ರ)ರಿಗಿಂತ ಉತ್ತಮರನ್ನು ಕಂಡಿಲ್ಲ" ನಮಗೆ ಹದೀಸ್ ಗ್ರಂಥಗಳಲ್ಲಿ ಅರಬ್ಬರ ಆಚರಣೆಯ ಕುರಿತು ಸಿಗುವ ಎಲ್ಲಾ ವಿಚಾರಗಳನ್ನು ಹ.ಆಯಿಶಾ(ರ)ರೇ ತಿಳಿಸಿದ್ದಾರೆ. ಅರಬರ ಸಾಮಾಜಿಕ ಪರಿಸ್ಥಿತಿ, ವಿವಾಹದ ಆಚರಣೆಗಳು, ಇಚ್ಛೇದನ, ಇಸ್ಲಾಮಿಗಿಂತ ಮೊದಲು ಅರಬರು ಯಾವೆಲ್ಲಾ ದಿನಗಳಲ್ಲಿ ಉಪವಾಸವನ್ನಾ ಚರಿಸುತ್ತಿದ್ದರು, ಮೃತರ ಕುರಿತಾದ ಆಚರಣೆಗಳು,ಕುರೈಶರ
ಅಜ್ಞ ನ ಸಂದರ್ಭದಲ್ಲಿ ತಂಗುತ್ತಿದ್ದ ಸ್ಥಳ ಇತ್ಯಾದಿ ಇವೆಲ್ಲವನ್ನೂ ಆಯಿಶಾ(ರ)ರೇ ನಮ್ಮ ಮುಂದಿರಿಸಿದ್ದಾರೆ.

"ತಂದೆಯಂತೆ ಮಗಳು" ಎಂಬಂತೆ ಆಯಿಶಾ(ರ)ರು ತಂದೆಯ ಹಾದಿಯಲ್ಲೇ ನಡೆದರು. ಕವನಗಳನ್ನು ಅರ್ಥೈಸುವುದು, ವಿಶ್ಲೇಷಿಸುವುದು, ನಾಲಗೆಯ ಬಗ್ಗೆ ಜಾಗೃತೆ ವಹಿಸುವುದು, ಭಾಷಣ ಮಾಡುವ ಸಂದರ್ಭದಲ್ಲಿ ಸಮರ್ಪಕವಾದ ಪದಗಳ ಬಳಕೆ, ಉಪಮೆ - ಅಲಂಕಾರಗಳ ಬಳಕೆ ಇತ್ಯಾದಿಗಳೆಲ್ಲವನ್ನೂ ನಾವು ಆಯಿಶಾ(ರ)ರಲ್ಲಿ ಕಾಣಬಹುದು.

ಹ. ಆಯಿಶಾ(ರ)ರ ಕೋಣೆಯ ಮುಂಭಾಗದಲ್ಲೇ ಮಸ್ಜಿದ್ ನಬವಿ ಇತ್ತು. ಹ. ಆಯಿಶಾ(ರ)ರು ತಮ್ಮ ಕೋಣೆ (ಮನೆ)ಯಲ್ಲೇ ಕುಳಿತುಕೊಂಡು ಉಪನ್ಯಾಸ ನೀಡುತ್ತಿದ್ದರು. ಕೆಲವು ವಿದ್ಯಾರ್ಥಿಗಳು ಕೋಣೆಯೊಳಗಡೆ, ಇನ್ನು ಕೆಲವರು ಮಸೀದಿಯ ಅಂಗಳದಲ್ಲಿ ಅಂದರೆ ಆಯಿಶಾ(ರ)ರ ಕೋಣೆಯ ಮುಂಭಾಗದಲ್ಲಿ ಕುಳಿತುಕೊಳ್ಳುತ್ತಿದ್ದರು. ಕೋಣೆಯ ಬಾಗಿಲಿಗೆ ಪರದೆಯನ್ನು ಹಾಕಲಾಗಿತ್ತು. ಅಲ್ಲಿಂದಲೇ ಆಯಿಶಾ(ರ)ರು ಉಪನ್ಯಾಸ ನೀಡುತ್ತಿದ್ದರು.

ಆಯಿಶಾ(ರ)ರು ಉಪನ್ಯಾಸವನ್ನು ಆರಂಭಿಸಿ ಪ್ರವಾದಿ ವಚನಗಳನ್ನು ಹೇಳಿ ಸುಮ್ಮನಾಗುತ್ತಿದ್ದರು. ಶಿಷ್ಯರು ಪ್ರಶ್ನಿಸಿದರೆ ಅದಕ್ಕುತ್ತರಿಸುತ್ತಿದ್ದರು. ಒಂದು ವೇಳೆ ಅವರು ಪ್ರಶ್ನಿಸದಿದ್ದರೆ ಶಿಷ್ಯರು ಸ್ವತಃ ಪ್ರಶ್ನೆಗಳನ್ನು ಕೇಳುವಂತೆ ಆಯಿಶಾ(ರ)ರು ಬೇರೆರೀತಿ-- ಉಪಾಯಗಳನ್ನು ಹೂಡುತ್ತಿದ್ದರು. ಯಾರಾದರೂ ಪ್ರಶ್ನೆ ಕೇಳುವಾಗ ಹಿಂಜರಿದರೆ ಅವರಿಗೆ ಪ್ರೋತ್ಸಾಹಿಸುತ್ತಿದ್ದರು. ಸಾಮಾನ್ಯವಾಗಿ ಹಿರಿಯರು ಹೆಚ್ಚು ಪ್ರಶ್ನೆಗಳನ್ನು ಕೇಳುತ್ತಿದ್ದರಾದರೂ, ಪ್ರಶ್ನೆಗಳನ್ನು ಕೇಳುವಾಗ ಮುಜುಗರ ಪಡುತ್ತಿದ್ದರು. ಆಗ ಆಯಿಶಾ(ರ)ರು "ನಾನು ನಿಮ್ಮ ಜೊತೆಯಾಗಿದ್ದೇನೆ. ಪ್ರತಿಯೊಂದು ಸಮಸ್ಯೆಗಳನ್ನು ನೀವು ನನ್ನಲ್ಲಿ ಕೇಳಿ ಪರಿಹಾರ ಕಂಡುಕೊಳ್ಳಬಹುದು" ಎಂದು ಪ್ರೋತ್ಸಾಹಿಸುತ್ತಿದ್ದರು. ಸ್ತ್ರೀಯರ ಕೆಲವೊಂದು ಸಮಸ್ಯೆಗಳು ಎಲ್ಲರ ಮುಂದೆ ಬಂದಾಗ ಅಲ್ಲಿ ಪರಸ್ಪರ ಚರ್ಚೆಗಳು ನಡೆಯುತ್ತಿದ್ದವು. ಕೊನೆಗೆ ಆಯಿಶಾ(ರ)ರು ಆ ಚರ್ಚಾ ವಿಷಯದ ಪರಿಹಾರಕ್ಕಾಗಿ ಪ್ರವಾದಿ ವಚನಗಳು, ಅವುಗಳ ಸಂದರ್ಭ-ಸನ್ನಿವೇಶಗಳನ್ನು ಹೇಳಿ ಸರಳ ವಿಧಾನದಲ್ಲಿ ಮನ ಮುಟ್ಟುವಂತೆ ಅರ್ಥೈಸುತ್ತಿದ್ದರು.

ಹ. ಆಯಿಶಾ(ರ)ರು ಉಪನ್ಯಾಸ ನೀಡುವ ಸಂದರ್ಭದಲ್ಲಿ ನುಡಿಗಟ್ಟುಗಳನ್ನು ಬಳಸುತ್ತಿದ್ದರು. ಅವಸರ ಪಡದೆ, ಸಾವಧಾನವಾಗಿ ಕುರ್ ಆನಿನ ರೀತಿಯಲ್ಲಿ ಸರಳ ಭಾಷೆಯಲ್ಲಿ ವಿವರಿಸುತ್ತಿದ್ದರು. ಬರೆದಿಟ್ಟುಕೊಳ್ಳಲು ಅನುಕೂಲವಾಗುವ ರೀತಿಯಲ್ಲಿ ಹೇಳುತ್ತಿದ್ದರು.

ಆಯಿಶಾ(ರ)ರು ಜ್ಞಾನಸಿದ್ಧಿಯಲ್ಲಿ ಅತ್ಯುನ್ನತ ಸ್ಥಾನವನ್ನು ಪಡೆದಿದ್ದರು. ಅಂದಿನ ಉಲಮಾಗಳಿಗೆ ಆಯಿಶಾ(ರ)ರು ಜ್ಞಾನದ ಮೇಲೆ ಸಂಪೂರ್ಣ ಭರವಸೆಯಿತ್ತು. ಸಾಮಾನ್ಯ ನಾಗರಿಕರೂ ಆಯಿಶಾ(ರ)ರ ವರದಿಗಳನ್ನು ದೃಢೀಕೃತ ಎಂದು ನಂಬುತ್ತಿದ್ದರು. ಇದೇ ಕಾರಣದಿಂದ ಪ್ರವಾದಿ(ಸ) ಯವರ ನಂತರ ಹಿರಿಯರಲ್ಲಿ ಮುಫ್ತಿಯ ಸ್ಥಾನಮಾನ ದೊರೆತವರಲ್ಲಿ ಆಯಿಶಾ(ರ)ರೂ ಓರ್ವರಾಗಿದ್ದಾರೆ. ಅದಲ್ಲದೆ ಹ. ಅಬೂಬಕರ್(ರ), ಉಮರ್ (ರ), ಉಸ್ಮಾನ್ (ರ)ಹಾಗೂ ಇನ್ನಿತರ ಪ್ರಸಿದ್ಧ ಸಹಾಭಿಗಳು ಯಾವುದಾದರೂ ಸಮಸ್ಯೆಗಳಲ್ಲಿ ಸಿಲುಕಿ ಬಿಟ್ಟರೆ ಅದರ ಪರಿಹಾರಕ್ಕಾಗಿ ಹ. ಆಯಿಶಾ(ರ)ರ ಬಳಿ ತೆರಳುತ್ತಿದ್ದರು. ಬಳಿಕ ಹ.ಆಯಿಶಾ(ರ)ರು ಸೂಚಿಸಿದ ಪರಿಹಾರವನ್ನು ಅಂಗೀಕರಿಸುತ್ತಿದ್ದರು. ಪ್ರಥಮ ದರ್ಜೆಯ ಸಾಹಾಬಿವರ್ಯರ ಫತ್ವಾಗಳನ್ನು ಪರಿಗಣಿಸಿದ ಜನರು ಹೇಳುತ್ತಾರೆ. "ಹ. ಆಯಿಶಾ(ರ)ರ ಫತ್ವಾಗಳು ಎಷ್ಟಿವೆಯೆಂದರೆ ಒಂದು ವೇಳೆ ಅದನ್ನು ಒಟ್ಟುಗೂಡಿಸಿದರೆ ಒಂದು ದೊಡ್ಡ ದಾಖಲೆಯ ಗ್ರಂಥವೇ ಬೇಕಾದೀತು."

ಹ.ಆಯಿಶಾ(ರ)ರ ಬಳಿಯಲ್ಲಿ ಜ್ಞಾನಾರ್ಜನೆಗೆ ಬರುತ್ತಿದ್ದವರಲ್ಲಿ ಬಾಲಕ, ಬಾಲಕಿಯರು, ಯುವಕ - ಯುವತಿಯರು ಹಾಗೂ ಹಿರಿಯರೂ ಇರುತ್ತಿದ್ದರು. ಹ.ಆಯಿಶಾ(ರ)ರು ತರಬೇತಿ ನೀಡುತ್ತಿರುವುದರೊಂದಿಗೆ ಉಪದೇಶಗಳನ್ನೂ ನೀಡುತ್ತಿದ್ದರು. ಯುವಕ - ಯುವತಿಯರು ಹಾಗೂ ಇನ್ನಿತರರಿಂದಿದ ಏನಾದರೂ ತಪ್ಪು ಸಂಭವಿಸಿದರೆ ಹ.ಆಯಿಶಾ(ರ)ರು ಅವರ ಮೇಲೆ ನಿಗಾ ಇಡುತ್ತಿದ್ದರು. ತಪ್ಪುಗಳನ್ನು ತಿದ್ದುವ, ಸಲಹೆ ನೀಡುವ ನೀತಿಯು ಹಿರಿಯರಿಗೆ ಹಾಗೂ ಕಿರಿಯರಿಗೆ ಬೇರೆ ಬೇರೆಯಾಗಿತ್ತು. ಹಿರಿಯರು ತಪ್ಪು ಮಾಡಿದರೆ ಅವರನ್ನು ಅಲ್ಲೇ ತಿದ್ದುವ ಬದಲು ಬೇರೆಯವರ ಮುಖಾಂತರ ಹೇಳಿ ಕಳುಹಿಸುತ್ತಿದ್ದರು ಹಾಗೂ ಅದಕ್ಕೆ ಸಂಬಂಧಿಸಿದಂತೆ ಕುರ್ ಆನ್ ಹಾಗೂ ಪ್ರವಾದಿ ವಚನಗಳ ಆಧಾರಗಳನ್ನು ಹೇಳುತ್ತಿದ್ದರು ಅಥವಾ ಅಗತ್ಯ ಬಿದ್ದರೆ ಸ್ವತಃ ತಾವೇ ಅವರ ಬಳಿಗೆ ತೆರಳುತ್ತಿದ್ದರು. ಒಂದು ವೇಳೆ ಮಕ್ಕಳು ತಪ್ಪು ಮಾಡಿದರೆ ಕೂಡಲೇ ಅವರನ್ನು ತಿದ್ದುತಿದ್ದರು. ಮಕ್ಕಳಿಗೆ ತಿಳಿಸಲು ತಡಮಾಡಿದರೆ, ಮಕ್ಕಳು ತಮ್ಮ ತಪ್ಪನ್ನು ಮರೆತು ಬಿಡುತ್ತಾರೆ ಎಂಬ ಸಂದೇಹ ಅವರಿಗಿತ್ತು. ಈ ತಿದ್ದುಪಡಿಗಳು ಶಿಕ್ಷಣಕ್ಕೆ ಸಂಬಂಧಿಸಿದವುಗಳಾಗಿವೆ. ಒಂದು ವೇಳೆ ಸಾರ್ವಜನಿಕರು ತಮಾಷೆ ಮಾಡುತ್ತಿದ್ದರೆ ಅಥವಾ ನಿಷಿದ್ಧ ಕಾರ್ಯಗಳಲ್ಲಿ ತೊಡಗಿದ್ದನ್ನು ಕಂಡರೆ ಆಯಿಶಾ(ರ)ರು ಅದನ್ನು ಕಠೋರವಾಗಿ ತಡೆಯುತ್ತಿದ್ದರು. ಒಂದು ವೇಳೆ ಸಾಮೂಹಿಕ ಪ್ರಮಾದಗಳು ಸಂಭವಿಸಿದರೆ ಮದೀನಾದ ಗವರ್ನರ್ ಗೆ ತಿಳಿಸುತ್ತಿದ್ದರು ಹಾಗೂ ಅವರು ಆಯಿಶಾ(ರ)ರ ಆದೇಶದ ಮೇರೆಗೆ ತಿದ್ದುಪಡಿ ಮಾಡುತ್ತಿದ್ದರು.

ಓರ್ವ ಸ್ತ್ರೀಯ ಮಗಳು ಬಹಳ ಸುಂದರಿಯಾಗಿದ್ದಳು. ಆದರೆ ಕಾಯಿಲೆಯಿಂದಾಗಿ ಅವಳ ಕೂದಲುಗಳು ಉದುರಿದ್ದವು. ಆ ಯುವತಿಯ ವಿವಾಹ ನಿಶ್ಚಯವಾಗಿತ್ತು. ಆ ಸ್ತ್ರೀಯು ಆಯಿಶಾ(ರ)ರ ಬಳಿ ಬಂದು, "ಯಹೂದಿ ಸ್ತ್ರೀಯರು ತಲೆಯ ಸೌಂದರ್ಯಕ್ಕಾಗಿ, ತೋರಿಕೆಗಾಗಿ ಕೂದಲುಗಳನ್ನು ಜೋಡಿಸಿಕೊಳ್ಳುತ್ತಾರೆ. ನಾನು ನನ್ನ ಮಗಳ ತಲೆಗೆ ಅಂತಹ ಕೂದಲನ್ನು ಹೊದಿಸಲೇ ?" ಎಂದು ಕೇಳಿದರು. ಆಗ ಆಯಿಶಾ(ರ), "ಪ್ರವಾದಿಯವರು(ಸ) ತೋರಿಕೆಯ ಕೂದಲನ್ನು ಜೋಡಿಸುವ ಹಾಗೂ ಜೋಡಿಸುವವರ ಮೇಲೆ ಶಾಪ ಹಾಕಿದ್ದಾರೆ" ಎಂದು ಹೇಳಿದರು.

ಮದೀನಾದ ಸ್ತ್ರೀಯರು ಮಕ್ಕಳು ಜನಿಸಿದಾಗ ಅವರನ್ನು ಆಯಿಶಾ(ರ)ರ ಬಳಿಗೆ ಕೊಂಡೊಯ್ಯುತ್ತಿದ್ದರು. ಸಮೃದ್ಧಿ ಹಾಗೂ ಪ್ರಾರ್ಥನೆಗಾಗಿ ವಿನಂತಿಸುತ್ತಿದ್ದರು. ಒಮ್ಮೆ ಅವರ ಬಳಿ ಓರ್ವ ಸ್ತ್ರೀ ಬಂದರು. ಆಕೆಯ ತಲೆಯ ಬುಡದಲ್ಲಿ ಕ್ಷೌರದ ಕತ್ತಿ ಇಟ್ಟಿರುವುದನ್ನು ಕಂಡ ಆಯಿಶಾ(ರ)ರು, "ಇದೇನು" ? ಎಂದು ಕೇಳಿದರು. ಆಕೆಯು, "ಇದರಿಂದ ಭೂತ ಹೆದರಿ ಓಡಿ ಹೋಗುತ್ತದೆ" ಎಂದಳು. ಆ ಕೂಡಲೇ ಆಯಿಶಾ(ರ)ರು ಆ ಕತ್ತಿಯನ್ನು ತೆಗೆದು ಎಸೆದರು. ಬಳಿಕ, "ಪ್ರವಾದಿಯವರು(ಸ) ಅಪಶಕುನದ (ಭವಿಷ್ಯ ಹೇಳುವುದು) ತಡೆದಿದ್ದಾರೆ.(ಇದೆಲ್ಲಾ ಭ್ರಮೆಯಾಗಿದೆ)" ಎಂದು ಉಪದೇಶಿಸಿದರು.

ಸ್ತ್ರೀಯರಿಗೆ ಆಭರಣಗಳನ್ನು ಧರಿಸುವ ಅನುಮತಿ ಯಿದೆಯಾದರೂ ಶಬ್ದ ಬರುವ ಆಭರಣಗಳನ್ನು ತೊಡುವುದರಿಂದ ತಡೆಯಲಾಗಿದೆ. ಗುಂಗುರು ಧರಿಸಿದ್ದ ಓರ್ವ ಬಾಲಕಿಯು ತನ್ನ ತಾಯಿಯೊಂದಿಗೆ ಬಂದಳು. ಆಯಿಶಾ(ರ)ರು ಆ ಬಾಲಕಿಯ ತಾಯಿಯೊಂದಿಗೆ ಗುಂಗುರುವನ್ನು ತೆರೆಗೆಯುವಂತೆ ಹೇಳಿದರು. ನನ್ನ ಬಳಿ ಈ ರೀತಿ ಕರೆದುಕೊಂಡು ಬರಬೇಡಿ ಎಂದರು. ಅಲ್ಲಿದ್ದ ಕೆಲವು ಸ್ತ್ರೀಯರು, "ಏಕೆ "?ಎಂದು ಪ್ರಶ್ನಿಸಿದರು. ಆಗ ಆಯಿಶಾ(ರ)ರು "ಯಾರ ಮನೆಯಲ್ಲಿ ಕಾರವಾನದಲ್ಲಿ ಶಬ್ದ ನಾದ ಕೇಳಿಸುತ್ತದೋ ಅಲ್ಲಿಗೆ ದೇವಚರರು ಆಗಮಿಸುವುದಿಲ್ಲ" ಎಂದರು.

ಸಂತೃಪ್ತಿಯ ಬಗ್ಗೆ ಪ್ರವಾದಿಯವರು(ಸ) ಹ.ಆಯಿಶಾ(ರ)ರಿಗೆ ನೀಡಿದ್ದ ತರಬೇತಿಯಂತೆ ಅವರು(ರ) ಅವರ ಮಾದರಿಯಾಗಿದ್ದರು. ಪ್ರವಾದಿಯವರು(ಸ) ನಿಧನದ ವೇಳೆ, "ಆಯಿಶಾ! ಬಂಗಾರದ ಒಂದು ಸಣ್ಣ ತುಂಡು ಇರಬಹುದಲ್ಲವೇ ?" ಎಂದರು. ಇದನ್ನು ಕೇಳಿದಾಕ್ಷಣ ಆಯಿಶಾ(ರ)ರು ಅದನ್ನು ತಂದರು. ಪ್ರವಾದಿಯವರು(ಸ) ಅದನ್ನು ದಾನ ಮಾಡಿ ಬಿಡುವಂತೆ ಹೇಳಿದರು. ಆಯಿಶಾ(ರ)ರು ಅದನ್ನು ದಾನ ಮಾಡಿದರು. ವಾಸ್ತವವಾಗಿ

ಪ್ರವಾದಿಯವರು(ಸ) ನಿಧನ ಹೊಂದಿದ ದಿನ ಮನೆಯಲ್ಲಿ ತಿನ್ನಲು ಏನೂ ಇರಲಿಲ್ಲ.

ಪ್ರವಾದಿಯವರ(ಸ) ನಂತರ ಹೆಚ್ಚೆಚ್ಚು ಉಡುಗೊರೆಗಳು ಬರುತ್ತಿದ್ದವು. ಆದರೆ ಸಂಜೆ ವೇಳೆಗೆ ಏನೂ ಉಳಿಯುತ್ತಿರಲಿಲ್ಲ. ಎಲ್ಲವನ್ನೂ ದಾನ ಮಾಡಿ ಬಿಡುತ್ತಿದ್ದರು. ದಾಸಿಯು ಟೀಕಿಸುತ್ತಿದ್ದಳು. ಅದಕ್ಕೆ "ಪ್ರವಾದಿಯವರ(ಸ) ಪ್ರಕಾರ ನಾವು ಎಂದಿಗೂ ಬಡವರಂತೆ ಜೀವಿಸಬೇಕು" ಎನ್ನುತ್ತಿದ್ದರು.

ಪ್ರವಾದಿ(ಸ)ಯವರೊಂದಿಗಿರುತ್ತಿದ್ದ ಅದೇ ಕೋಣೆಯಲ್ಲಿ ಜೀವನ ಸವೆಸಿದರು. ಉಮರ್(ರ)ರು ತಮ್ಮ ಗೋರಿಗಾಗಿ ಜಾಗ ಕೇಳಿದಾಗ ಮಾತ್ರ ಆಯಿಶಾ(ರ)ರು ಆ ಕೋಣೆಯನ್ನು ಬಿಟ್ಟುಕೊಟ್ಟಿದ್ದರು.

ಲಕ್ಷಗಟ್ಟಲೆ ಮೊತ್ತವನ್ನು ಒಂದೇ ದಿನದಲ್ಲಿ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿ ಬಿಡುತ್ತಿದ್ದರು. ಬಳಿಕ ಸಂತೋಷ--ಸಂತೃಪ್ತಿಯೊಂದಿಗೆ ಎದ್ದು ನಿಲ್ಲುತ್ತಿದ್ದರು.

ಒಮ್ಮೆ ಓರ್ವ ಮಹಿಳೆಗೆ ಆತನ ಪತಿಯು ಬಹಳ ನಿರ್ಧಾಕ್ಷಿಣ್ಯವಾಗಿ ಹೊಡೆದನು. ಆಕೆಯ ಬೆನ್ನ ಮೇಲೆ ಬಾಸುಂಡೆಗಳು ಮೂಡಿದವು. ಆ ಮಹಿಳೆ ಆಯಿಶಾ(ರ)ರ ಬಳಿ ಬಂದು ತನ್ನ ಬೆನ್ನು ತೋರಿಸಿದಳು. ಆಗ ಆಯಿಶಾ(ರ)ರು ಪ್ರವಾದಿಯವರು(ಸ) ಮನೆಗೆ ಬಂದಾಗ ಮುಸ್ಲಿಂ ಪತ್ನಿಯರು ಸಂಕಷ್ಟಗಳನ್ನು ಅನುಭವಿಸುತ್ತಿರುವ ಉದಾಹರಣೆಯನ್ನು ಹೇಳಿದರು ಪ್ರವಾದಿಗಳೇ(ಸ)! ಆ ಮುಗ್ಧ ಸ್ತ್ರೀಯ ಬೆನ್ನು ಆಕೆಯ ವಸ್ತ್ರಕಿಂತಲೂ ಹೆಚ್ಚು ಹಸಿರಾಗುತ್ತಿದೆ ಎಂದರು. ಆಗ ಪ್ರವಾದಿಯರು(ಸ) ಆ ಪತ್ನಿಯರ ಪತಿಯಂದಿರು ಮತ್ತು ಎಲ್ಲರನ್ನುದ್ದೇಶಿಸಿ ಇಂತಹ ಶಿಕ್ಷೆ ನೀಡುವುದರಿಂದ ಎಲ್ಲರನ್ನೂ ತಡೆದರು.

ಸ್ತ್ರೀಯರು ಸಮಸ್ಯೆಗಳ ಸಮಾಧಾನಕ್ಕಾಗಿ ಪ್ರವಾದಿಯವರ(ಸ) ಬಳಿ ಬರುತ್ತಿದ್ದರು. ಸಾಮಾನ್ಯ ಸಮಸ್ಯೆಗಳನ್ನು ಕೇಳುತ್ತಿದ್ದರು. ಆದರೆ ತಮ್ಮ ಬಹಳ ವೈಯಕ್ತಿಕ ವಿಚಾರಗಳನ್ನು ಕೇಳಲು ಮುಜುಗರ ಪಡುತ್ತಿದ್ದರು. ಈ ಸಂದರ್ಭದಲ್ಲಿ ಸ್ತ್ರೀಯರು ಹ.ಆಯಿಶಾ(ರ)ರನ್ನು ತಮ್ಮ ಪ್ರತಿನಿಧಿಯಾಗಿ ಮಾಡಿದ್ದರು.

ಹ. ಆಯಿಶಾ(ರ)ರು ಪ್ರವಾದಿಯವರ(ಸ)ಬಳಿ ಅವರ ಸಮಸ್ಯೆಗಳನ್ನು ಹೇಳಿ ಅದರ ಉತ್ತರವನ್ನು ಸ್ತ್ರೀಯರಿಗೆ ತಿಳಿಸುತ್ತಿದ್ದರು.

ಒಂದು ವೇಳೆ ಪತಿಯು ನಿಧನ ಹೊಂದಿದರೆ ಆತನ ವಿಧವೆಯು ನಾಲ್ಕು ತಿಂಗಳು ಹತ್ತು ದಿನಗಳವರೆಗೆ ಇದ್ದ ತ್ ಗೆ ಕುಳಿತುಕೊಳ್ಳಬೇಕು. ಮನೆಯಿಂದ ಹೊರಗೆ ಬೇರೆ ಸ್ಥಳಕ್ಕೆ ಹೋಗಬಾರದು. ಇದೊಂದು ಇಸ್ಲಾಮಿನ ನಿಯಮವಾಗಿದೆ. ಈ ವಿಚಾರದಲ್ಲಿ ಪತಿಯು ಎಲ್ಲಿ ನಿಧನ ಹೊಂದುತ್ತಾನೋ ಆತನ ಪತ್ನಿಯು ಅಲ್ಲೇ ಇದ್ದತ್ ನ ದಿನಗಳನ್ನು ಕಳೆಯಬೇಕು ಅಥವಾ ಒಂದು ವೇಳೆ ಸ್ತ್ರೀಯು ಜೊತೆಯಲ್ಲಿಲ್ಲದಿದ್ದರೆ ಆಕೆಯ ಪತಿಯ ನಿಧನದ ವಾರ್ತೆ ತಿಳಿದರೆ ಆಕೆ ಎಲ್ಲಿದ್ದಾಳೋ ಅಲ್ಲೇ ಉಳಿದು ಇದ್ದತ್ ಗೆ ಕುಳಿತುಕೊಳ್ಳಬೇಕು. ಅಲ್ಲಿಂದ ಹೊರಗೆ ಹೋಗುವುದು ಹಾಗೂ ಪ್ರಯಾಣ ಮಾಡುವುದು ಆಕೆಯ ಮೇಲೆ ನಿಷಿದ್ಧ ಆಗಿದೆ ಎಂದು ಜನರು ಫತ್ವಾ ನೀಡತೊಡಗಿದರು. ಈ ಫತ್ವಾದಿಂದಾಗಿ ವಿಧವೆಯರು ಸಂಕಷ್ಟಕ್ಕೆ ಸುಲುಕಿದರು. ಕೆಲವೊಮ್ಮೆ ಪತಿಯು ಪರಊರಿನಲ್ಲಿ ನಿಧನ ಹೊಂದಿದರೆ ಆತನ ವಿಧವೆಯ ಪಾಲಿಗೆ, ಆಕೆಯ ಆಸ್ತಿ-ಅಂತಸ್ತು, ಮಾನ-ಮರ್ಯಾದೆಯ ನಿಟ್ಟಿನಲ್ಲಿ ಆ ಜಾಗವು ಅಪಾಯಕಾರಿಯಾಗಿ ಪರಿಣಮಿಸಬಹುದು. ಆಯಿಶಾ(ರ)ರು ಒಂದು ಸಂದರ್ಭದಲ್ಲಿ ಈ ಸಂಕಷ್ಟವನ್ನು ಪರಿಹರಿಸಿದರು. ಆಯಿಶಾ(ರ)ರ ಓರ್ವ ಸಹೋದರಿಯು ತಲ್ಹಾ(ರ) ರನ್ನು ವಿವಾಹವಾಗಿದ್ದರು. ತಲ್ಹಾ(ರ)ರು ಜಮಾಲ್ ಯುದ್ಧದಲ್ಲಿ ಹುತಾತ್ಮರಾದರು. ಪತ್ನಿಯು ಅವರ ಜೊತೆಗಿದ್ದರು. ಮೇಲೆ ಜನರು ಸೂಚಿಸಿದ ಫತ್ವಾದ ಪ್ರಕಾರ ತಲ್ಹಾ(ರ)ರ ವಿಧವೆಯು ಅಲ್ಲೇ ತಂಗ ಬೇಕಿತ್ತು. ಆದರೆ ಆಯಿಶಾ(ರ)ರು ಅವರನ್ನು ತಮ್ಮ ಜೊತೆ ಕರೆದುಕೊಂಡು ಹೋದರು. ಇದು ಫತ್ವದ ವಿರುದ್ಧವಾಗಿದ್ದರಿಂದ ಜನರು ಪರಸ್ಪರ ಚರ್ಚಿ ಸತೊಡಗಿದರು. ಪ್ರಸಿದ್ಧ ಇಮಾಮ್ ಆಗಿದ್ದ

ಹ. ಅಯ್ಯೂಬ್ ತಾಬಿಈ(ರ)ಯವರಲ್ಲಿ ಆಯಿಶಾ(ರ)ರು ಹೀಗೇಕೆ ಮಾಡಿದರೆಂದು ಜನರು ಕೇಳಿದರು, ಹ. ಅಯ್ಯೂಬ್ (ರ)ರು ಹೇಳಿದರು, "ಹ.ಆಯಿಶಾ(ರ)ರು ತಲ್ಹಾ(ರ)ರ ವಿಧವೆಯನ್ನು ಮನೆಯಿಂದ ಹೊರಗೆ ತರಲಿಲ್ಲ, ಬದಲಾಗಿ ಮನೆಯೊಳಗೆ ಕರೆದುಕೊಂಡು ಹೋದರು." ಜನರೆಲ್ಲರೂ

ಇದರಿಂದ ಸಂತುಷ್ಟರಾದರು. ಬಳಿಕ ಸಾಮಾನ್ಯ ವಾಗಿ ಇಂತಹ ಸಂದರ್ಭಗಳು ಎದುರಾದರೆ ಜನರು ಆಯಿಶಾ(ರ)ರ ಕ್ರಮವನ್ನು ಅನುಸರಿಸ ತೊಡಗಿದರು. ಇದು ಪೀಡಿತ ಸ್ತ್ರೀಯರ ಪಾಲಿಗೆ ದೊಡ್ಡ ಉಪಕಾರವಾಗಿದೆ.

ಆಯಿಶಾ(ರ)ರು ತಂದೆ ಅಬೂಬಕರ್(ರ)ರಿಂದಲೇ ಕವನದ ಕಲೆಯನ್ನು ಕಲಿತಿದ್ದರು. ಸುಖ-ದುಃಖ ಹಾಗೂ ವಿಶೇಷ ಸಂದರ್ಭಗಳಲ್ಲಿ ಅರಬರು ಕವನ ವಾಚಿಸುತ್ತಿದ್ದರು. ಆಯಿಶಾ(ರ)ರಲ್ಲೂ ಈ ಗುಣವಿತ್ತು. ಎಲ್ಲರಿಗಿಂತ ಮಿಗಿಲಾಗಿ ಕವನವನ್ನು ವಿಶ್ಲೇಷಿಸುವ ರೀತಿಯು ಆಯಿಶಾ(ರ)ರಲ್ಲಿ ಉನ್ನತ ಮಟ್ಟದಲ್ಲಿತ್ತು. ಇದೇ ಕಾರಣದಿಂದ ಪ್ರಸಿದ್ಧ ಕವಿಗಳು ಆಯಿಶಾ(ರ)ರ ಬಳಿ ಬಂದು ಕವನಗಳನ್ನು ವಾಚಿಸಿ ಸಲಹೆ ಪಡೆಯುತ್ತಿದ್ದರು. ಆಯಿಶಾ(ರ)ರು ತಮ್ಮ ಶಿಷ್ಯರಿಗೆ ಕುರ್ ಆನ್ ಹಾಗೂ ಹದೀಸ್ ಸೂಕ್ಷ್ಮ ವಿಷಯಗಳನ್ನು, ಅರಬಿ ಭಾಷೆಯನ್ನು ತಿಳಿಸುವಾಗ ಪ್ರಸಿದ್ಧ ಕವಿಗಳ ಕವನಗಳನ್ನೂ ವಾಚಿಸುತ್ತಿದ್ದರು, ಅವುಗಳನ್ನು ವಿಮರ್ಶಿಸುತ್ತಿದ್ದರು. ಆಗ ಶಿಷ್ಯರು, "ಮಾತೆ! ನಿಮಗೆ ನಿಮ್ಮ ಕವನ ವಾಚನದ ಬಗ್ಗೆ ಆಶ್ಚರ್ಯವಾಗುವುದಿಲ್ಲ. ಏಕೆಂದರೆ ನೀವು ಅಬೂಬಕರ್(ರ)ರ ಪುತ್ರಿಯಾಗಿದ್ದೀರಿ" ಎನ್ನುತ್ತಿದ್ದರು.

ಪ್ರವಾದಿಯವರಿಂದ(ಸ) ಶಿಕ್ಷಣ ತರಬೇತಿ ಪಡೆಯುವ ಸೌಭಾಗ್ಯ ದೊರೆತ ಮಹಿಳಾ ರತ್ನಗಳ ವ್ಯಕ್ತಿತ್ವವನ್ನು ಹ. ಆಯಿಶಾ(ರ)ರಿಗೆ ಹೋಲಿಸಬಹುದು. ಪ್ರವಾದಿ ಪತ್ನಿಯರು, ಪುತ್ರಿಯರು ಅವರ ಬಗೆಗಿನ ಪ್ರಶಂಸನೀಯ ವಿಷಯಗಳು ನಮಗೆ ಹಲವಾರು ಹದೀಸ್ ಗಳಲ್ಲಿ ಕಂಡುಬರುತ್ತದೆ. ಈ ಹದೀಸ್ ಗಳ ಆಧಾರದಲ್ಲಿ ಇಸ್ಲಾಮಿನ ಎಲ್ಲಾ ವಿದ್ವಾಂಸರ ಹೇಳಿಕೆಯಂತೆ ಸ್ತ್ರೀಯರಲ್ಲಿ ಖದೀಜಾ(ರ), ಫಾತಿಮಾ(ರ) ಹಾಗೂ ಆಯಿಶಾ(ರ)ರ ಸ್ಥಾನವು ಅತ್ಯುನ್ನತವಾಗಿದೆ.

ಈ ಎಲ್ಲಾ ಮಹಾನ್ ಮಹಿಳಾಮಣಿಗಳಲ್ಲಿ ಆಯಿಶಾ(ರ)ರ ಸ್ಥಾನ ಅತ್ಯುನ್ನತವಾಗಿತ್ತು. ಅವರು (ರ) ಧಾರ್ಮಿಕ, ಸಾಮಾಜಿಕ, ಆಡಳಿತಾತ್ಮಕ ಕ್ಷೇತ್ರಗಳಲ್ಲಿ ಅತ್ಯುನ್ನತ ಸಾಧನೆ ಮಾಡಿದ್ದಾರೆ. ಅವರ (ರ) ಜ್ಞಾನಾರ್ಜನೆ, ಚಾತುರ್ಯ, ತರಬೇತಿಯ ಶೈಲಿ, ಧರ್ಮ- ಶರೀಅತ್ ಅನ್ನು ವಿಸ್ತಾರವಾಗಿ ತಿಳಿಸುವ ರೀತಿ, ಕುರ್ ಆನ್ ಹಾಗೂ ಹದೀಸ್ ನ ಜ್ಞಾನವನ್ನು ಪಸರಿಸುವ ಶೈಲಿ, ಇತರರ ಹಕ್ಕು ಬಾಧ್ಯತೆಗಳನ್ನು ಪೂರೈಸುವುದು, ತರಬೇತಿಯ ಶೈಲಿಯಿಂದಾಗಿ ಅವ ಶಿಷ್ಯರು ಮುಂದೆ ಪ್ರಸಿದ್ಧ ಇಮಾಮರಾದರು. ಹೀಗೆ ಹ.ಆಯಿಶಾ(ರ)ರು ಎಲ್ಲಾ ರಂಗದಲ್ಲೂ ಆದರ್ಶ ಮಹಿಳೆಯಾಗಿದ್ದಾರೆ. ಇಡೀ ಮಾನವಕುಲದ ಸ್ತ್ರೀಯರಿಗೆ ಆಯಿಶಾ(ರ)ರ ಜೀವನದಲ್ಲಿ ಒಂದು ಮಾದರಿಯಿದೆ.

## ಅಡಿ ಟಿಪ್ಪಣಿ


1. ವಚನ ಸಾಹಿತ್ಯದಲ್ಲಿ ಸ್ತ್ರೀಯರ ಕ್ರಾಂತಿ
2. ಹೆಚ್. ಜಿ. ಶೋಭಾ
3. ಕನ್ನಡ ಸಾಹಿತ್ಯ ಚರಿತ್ರೆ ಒಂದು ಸಮೀಕ್ಷೆ =
4. ಎಲ್. ಎಸ್. ಕಾಡದೇವರ ಮಠ
5. ವಚನ ಧರ್ಮ ಸಾರ = ಎಂ. ಆರ್ ಶ್ರೀನಿವಾಸಮೂರ್ತಿ
6. ವಚನ ಸಾಹಿತ್ಯ ದರ್ಶನ = ಸಿ.ವಿ. ಕೆರಿಮನಿ
7. ಆದರ್ಶ ನಾರಿಯರು= ಅಬೂಬಕರ್ ನದಿವಿ
8. ಗೃಹ ಜ್ಯೋತಿ = ಮಹಮ್ಮದ್ ಯೂಸುಫ್ ಇಸ್ಲಾಹೀ
9. ಹಝ್ರತ್ ಆಯಿಶಾ(ರ) = ಮಾಯಿಲ್ ಖೈರಾಬಾದಿ